ಕಾರವಾರದಲ್ಲಿರುವ ಯುವಜನ ವಿದ್ಯಾರ್ಥಿನಿಲಯ

೨೪೪ ಶ್ರೀ ಪ್ರಭಾಕರ ಸದಾಶಿವ ರಾಣೆ (ಕಾರವಾರ).—ಮಾನ್ಯ ಸಮಾಜ ಕಲ್ಯಾಣ ಮತ್ತು ಯುವಜನ ಸೇವಾ, ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಾರವಾರದಲ್ಲಿ ಕೇಂದ್ರ ಸರ್ಕಾರದವರು ಯೂತ್ ಹಾಸ್ಟೆಲನ್ನು ಮಂಜೂರು ಮಾಡಿರುವುದು ನಿಜವೇ ?

ಆ) ಹಾಗಾದರೆ ಇದಕ್ಕೆ ಮಂಜೂರಾದ ಹಣವೆಷ್ಟು ?

ಇ) ರಾಜ್ಯ ಸರ್ಕಾರವು ಇದಕ್ಕೆ ಅಗತ್ಯ ಇರುವ ಭೂಮಿಯನ್ನು ಒದಗಿಸಿದೆಯೇ ?

ಶ್ರೀ ಪಿ.ಜಿ ಆರ್. ಸಿಂಧ್ಯ. (ಸಮಾಜ ಕಲ್ಯಾಣ ಮತ್ತು ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು) —

ಅ) ಹೌದು.

ಆ) ಕೇಂದ್ರ ಸರ್ಕಾರ ರೂ. ೧೫.೦೦ ಲಕ್ಷಗಳನ್ನು ಈಗಾಗಲೇ ಸಿ.ಪಿ.ಡಬ್ಲ್ಯೂ.ಡಿ ಗೆ ಬಿಡುಗಡೆ ಮಾಡಲಾಗಿದೆ.

ಇ) ಪರಿಶೀಲನೆಯಲ್ಲಿದೆ.

ಮೂರು ಸಾವಿರ ಹೆಣ್ಣು ಮಕ್ಕಳನ್ನು ದೇವದಾಸಿಯರನ್ನಾಗಿ ಮಾಡಿಸಿದ್ದ ಬಗ್ಗೆ

೮೪೯ ಶ್ರೀಮತಿ ಶಕುಂತಲ ಟಿ. ಚೌಗಲೆ (ಚಿಕ್ಕೋಡಿ).—ಮಾನ್ಯ ಸಮಾಜ ಕಲ್ಯಾಣ ಯುವ ಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸರ್ಕಾರದವರು ದೇವದಾಸಿ ಸಮರ್ಪಣ ನಿಷೇಧ ಕಾಯಿದೆಯನ್ನು ೧೯೮೨ರಲ್ಲಿ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದರೂ ತಾರೀಖು ೨೦-೨-೮೯ರಂದು ಬೆಳಗಾವಿ ಜಿಲ್ಲೆಯ ಸವದತ್ತಿಯ ಎಲ್ಲಮ್ಮನ ದೇವಸ್ಥಾನದಲ್ಲಿ ೯ರಿಂದ ೧೫ವರ್ಷದ ೩,೦೦೦ ಹೆಣ್ಣು ಮಕ್ಕಳನ್ನು ದೇವದಾಸಿಯರನ್ನಾಗಿ ಮಾಡಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ರೀತಿಯಾಗಿ ಎಲ್ಲಮ್ಮನ ದೇವಸ್ಥಾನದಲ್ಲಿ ವರ್ಷಕ್ಕೊಮ್ಮೆ ಪಾಡಿಸುತ್ತಾರೆಂದು ಸರ್ಕಾರಕ್ಕೆ ಗೊತ್ತಿದ್ದರೂ ಯೋಗ, ಮೇಳೆಯಲ್ಲಿ ಅಲ್ಲಿ ಕಾವಲನ್ನಿರಿಸಿ ಇಂತಹ ಪ್ರಸಂಗ ಬರದಂತೆ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ದೇವದಾಸಿ ಸಮರ್ಪಣಾ ನಿಷೇಧ ಕಾಯಿದೆಯನ್ನು ೧೯೮೪ ರಿಂದ ಜಾರಿಗೆ ತರಲಾಗಿದೆ.

ಆ) ಈ ಬಗ್ಗೆ ಪತ್ರಿಕೆಗಳಲ್ಲಿ ಮಾತ್ರ ವರದಿ ಬಂದಿದ್ದು, ಸದರಿ ವರದಿಯು ಸತ್ಯಕ್ಕೆ ದೂರ ಎಂದು ತಿಳಿದು ಬಂದಿದೆ.

ಇ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಧಿಕಾರಿಗಳು, ವಾರ್ತಾ ಮತ್ತು ಪ್ರಚಾರ ಅಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳು ಹಾಜರಿದ್ದು ಯಾರನ್ನೂ ದೇವದಾಸಿಯಾಗಿ ಅರ್ಪಣೆ ಮಾಡದಂತೆ ಕ್ರಮ ತೆಗೆದುಕೊಂಡಿದ್ದಾರೆ.

ಸಂಡೂರಿನಲ್ಲಿ ಬಸ್ ನಿಲ್ದಾಣ ನಿರ್ಮಾಣ

೮೫೫. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಡೂರು ಬಸ್ ನಿಲ್ದಾಣದ ಅಂದಾಜು ವೆಚ್ಚವೆಷ್ಟು, ಈ ಅಂದಾಜಿನಲ್ಲಿ ಪ್ರಯಾಣಿಕರಿಗೆ ಕುಳಿತ ಕೊಳ್ಳಲು ಬೆಂಚುಗಳ ನಿರ್ಮಾಣದ ಕೆಲಸವು ಸೇರಿದೆಯೆ? ಹಾಗಿದ್ದಲ್ಲಿ ಬೆಂಚುಗಳನ್ನು ನಿರ್ಮಾಣ ಮಾಡದಿರಲು ಕಾರಣಗಳೇನು ?